# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ–35 ಅರಮನೆನಗರ, 17ನೇ ಅಡ್ಡರಸ್ತೆ, ಸದಾಶಿವನಗರ, ರಾಮಕೃಷ್ಣ ಹೆಗಡೆ ಸಂಕೀರ್ಣ, ಮೊದಲನೆ ಮಹಡಿ, ಸದಾಶಿವನಗರ,ಬೆಂಗಳೂರು

---

ಸಂಖ್ಯೆ: ಸ.ಅ/ವಾರ್ಡ ಸಮಿತಿ–35/ಸಭೆ–3/2020–21 ದಿನಾಂಕ: 10–11–2020

## ದಿನಾಂಕ:10–11–2020 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು:

### ಸಭೆಯಲ್ಲಿ ಹಾಜರಿದ್ದವರು:

1. ಹಿರಿಯ ಆರೋಗ್ಯ ಪರಿವೀಕ್ಷಕರು
2. ಕಿರಿಯ ಆರೋಗ್ಯ ಪರಿವೀಕ್ಷಕರು
3. ಕಂದಾಯ ಮೌಲ್ಯಮಾಪಕರು/ಪರಿವೀಕ್ಷಕರು/ವಸೂಲಿಗಾರರು.
4. BWSSB SADASHIVANAGAR & Mathikere
5. BESCOM C-2 & Mathikere C-6
6. BBMP Horticulture Suptd
7. BBMP electrical JE
8. ವಾರ್ಡ್ ಸಮಿತಿ ಸದಸ್ಯರು.

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಯಾದ ಶ್ರೀಮತಿ. ಹರ್ಷಾ ನಾಯಕ್ ರವರು ವಾರ್ಡ್ ಸಮಿತಿಯ ಸದಸ್ಯರನ್ನು ಮತ್ತು ಅಧಿಕಾರಿ/ಸಿಬ್ಬಂದಿಗಳನ್ನು ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡವಳಿಯನ್ನು ಓದಲಾಗಿ, ತೆಗೆದುಕೊಂಡಿರುವ ಕ್ರಮದ ಬಗ್ಗೆ ಚರ್ಚಿಸಲಾಗಿದ್ದು, ಸಭೆಯನ್ನು ಪ್ರಾರಂಭಿಸಲಾಯಿತು.

**ಈ ಕೆಳಕಂಡ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯ ಸಭೆಯಲ್ಲಿ ಚರ್ಚಿಸಲಾಯಿತು.**

1. **BWSSB ಸಂಭಂದಿಸಿದಂತೆ ಈ ಕೆಳಕಂಡ ವಿಚಾರಗಳ ಬಗ್ಗೆ ಕ್ರಮ ವಹಿಸಲು ತಿಳಿಸಲಾಗಿರುತ್ತದೆ.**
   - ಮಾನ್ಯ ಮುಖ್ಯಮಂತ್ರಿರವರ ನಿವಾಸದ ಬಳಿ ಸ್ಯಾನಿಟರಿ ಲೈನ್ ಬದಲಿಸಲು
   - 17ನೇ ಅಡ್ಡರಸ್ತೆ ರಂಗನಾಥಪುರದ ಮ್ಯಾನ್‌ಹೋಲ್ ದುರಸ್ಥಿ ಪಡಿಸುವುದು
   - 10ನೇ ಅಡ್ಡರಸ್ತೆ ಎಂಎಸ್‌ಆರ್ ನಗರ ನೀರಿನ ಲೈನ್ ದುರಸ್ಥಿ ಪಡಿಸುವುದು
   - ಯಾವುದೇ ಕಾಮಗಾರಿಯನ್ನು ಕೈಗೊಳ್ಳುವಲ್ಲಿ ಇತರೇ ಇಲಾಖೆಗಳೊಂದಿಗೆ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಲು ಸಭೆಯಲ್ಲಿ ತಿಳಿಸಲಾಯಿತು.
2. **BESCOM ಸಂಭಂದಿಸಿದಂತೆ ಈ ಕೆಳಕಂಡ ವಿಚಾರಗಳ ಬಗ್ಗೆ ಕ್ರಮ ವಹಿಸಲು ತಿಳಿಸಲಾಗಿರುತ್ತದೆ.**
   - ಯಾವುದೇ ಕಾಮಗಾರಿಯನ್ನು ಕೈಗೊಳ್ಳುವಲ್ಲಿ ಇತರೇ ಇಲಾಖೆಗಳೊಂದಿಗೆ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಲು ಸಭೆಯಲ್ಲಿ ತಿಳಿಸಲಾಯಿತು.
   - ಮತ್ತಿಕೆರೆ 8ನೇ ಅಡ್ಡರಸ್ತೆಯಲ್ಲಿ L&T ವತಿಯಿಂದ ಕೇಬಲ್ ಅಳವಡಿಸುತ್ತಿದ್ದು, BWSSB ಪೈಪ್ damage ಮಾಡಿದ್ದು ಕೂಡಲೇ ಪುನರ್ ನಿರ್ಮಾಣ ಮಾಡಲು ತಿಳಿಸಿದ್ದು, ತಪ್ಪಿದ್ದಲ್ಲಿ ಬೆಸ್ಕಾಂ ಸಂಸ್ಥೆಗೆ ದಂಡ ವಿಧಿಸಲು ತಿಳಿಸಲಾಯಿತು.
3. **BBMP Electrical ಸಂಭಂದಿಸಿದಂತೆ ಈ ಕೆಳಕಂಡ ವಿಚಾರಗಳ ಬಗ್ಗೆ ಕ್ರಮ ವಹಿಸಲು ತಿಳಿಸಲಾಗಿರುತ್ತದೆ.**
   - ಸದಾಶಿವನಗರ, ಮತ್ತಿಕೆರೆ, ಅಶ್ವಥ್‌ನಗರ, ಮಲ್ಲೇಶ್ವರಂ ಕಡೆಗಳಲ್ಲಿ ರಾತ್ರಿ ಹೊತ್ತಿನಲ್ಲಿ ಬೀದಿ ದೀಪಗಳು ಕಾರ್ಯನಿರ್ವಹಿಸದೇ ಇರುವ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.
   - ಮುಂದಿನ ಸಭೆಯಲ್ಲಿ BBMP Electrical ಸಂಬಂಧಪಟ್ಟ ಗುತ್ತಿಗೆದಾರರು ಹಾಜರಿರಲು ತಿಳಿಸಲಾಗಿರುತ್ತದೆ.

ಮು.ತಿ.ನೋ

* ವಾರ್ಡ್–35ಕ್ಕೆ ಸಂಬಂಧಿಸಿದಂತೆ RWA ರವರ NOC ಪತ್ರವಿಲ್ಲದೇ BBMP Electrical ರವರ ಬಿಲ್ ಪಾವತಿಸದೇ ಇರಲು ಕ್ರಮ ಕೈಗೊಳ್ಳಲು ತಿಳಿಸಿದೆ.

4. **BBMP HORTICULTURE ಸಂಭಂದಿಸಿದಂತೆ ಈ ಕೆಳಕಂಡ ವಿಚಾರಗಳ ಬಗ್ಗೆ ಕ್ರಮ ವಹಿಸಲು ತಿಳಿಸಲಾಗಿರುತ್ತದೆ.**
   * ಆರ್.ಎಂ.ವಿ ಪಾರ್ಕ್‌ನಲ್ಲಿ ಬೋರ್‌ವೆಲ್ ಅವಶ್ಯಕತೆ ಇರುತ್ತದೆ.
   * ಒಣ ಎಲೆಗಳು ವಿಲೇವಾರಿ ಯಾಗದೇ ಇರುವ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.
   * ರಸ್ತೆ ಬದಿ NAME BOARD ಗಳನ್ನು ದುರಸ್ಥಿ ಪಡಿಸಲು ತಿಳಿಸಿರುತ್ತಾರೆ.

5. **BBMP FOREST ಸಂಭಂದಿಸಿದಂತೆ ಈ ಕೆಳಕಂಡ ವಿಚಾರಗಳ ಬಗ್ಗೆ ಕ್ರಮ ವಹಿಸಲು ತಿಳಿಸಲಾಗಿರುತ್ತದೆ.**
   * ರಸ್ತೆ ಬದಿ ಬರುವ ಮರದ ರೆಂಬೆಗಳನ್ನು ತೆರವುಗೊಳಿಸಲು ತಿಳಿಸಲಾಯಿತು.

ವಾರ್ಡ್ ಸಮಿತಿ ಸಭೆಯಲ್ಲಿ ಬೆಸ್ಕಾಂ ಮತ್ತು BWSSB ವತಿಯಿಂದ ಕೈಗೆತ್ತಿಕೊಳ್ಳುವ ಅಭಿವೃದ್ಧಿ ಕಾಮಗಾರಿಯನ್ನು BBMP ಅಧಿಕಾರಿಗಳ ಗಮನಕ್ಕೆ ತಂದು ಕಾಮಗಾರಿಯನ್ನು ನಿರ್ವಹಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. BBMP, BWSSB ಮತ್ತು BESCOM ಇಲಾಖೆಗಳಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳನ್ನು RWA ಗಮನಕ್ಕೆ ತರುವಂತೆ ವಾರ್ಡ್ ಸಮಿತಿಯ Whatsapp Group ನಲ್ಲಿ ಪೋಸ್ಟ್ ಮಾಡಲು ತಿಳಿಸಲಾಗಿರುತ್ತದೆ. ಮತ್ತು ಸಭೆಗೆ ಹಾಜರಾಗದೇ ಇರುವ ಅಧಿಕಾರಿ/ಸಿಬ್ಬಂದಿ ವರ್ಗದ ಮೇಲೆ ಕ್ರಮ ಜರುಗಿಸುವ ಬಗ್ಗೆ ಮಾನ್ಯ ಆಯುಕ್ತವರೊಂದಿಗೆ ಚರ್ಚಿಸಲು ತಿಳಿಸಿರುತ್ತಾರೆ.

**ಅಧ್ಯಕ್ಷರು ಮತ್ತು**
**ನೋಡೆಲ್ ಅಧಿಕಾರಿ**

**ಕಾರ್ಯದರ್ಶಿ ಮತ್ತು**
**ಸಹಾಯಕ ಅಭಿಯಂತರರು, ವಾರ್ಡ್–35**

ಪ್ರತಿಯನ್ನು:

1. ಪೂಜ್ಯ ಮಹಾಪೌರರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಪೂಜ್ಯ ಉಪ ಮಹಾಪೌರರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಆಯುಕ್ತರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಕಾರ್ಯದರ್ಶಿಗಳು ಕೌನ್ಸಿಲ್ ಕಾರ್ಯಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ವಾರ್ಡ್ ಸಮಿತಿ ಸದಸ್ಯರು ಬಿಬಿಎಂಪಿ ರವರ ಅವಗಾಹನೆಗಾಗಿ ಮಂಡಿಸಿದೆ.
6. ಮಾನ್ಯ ಜಂಟಿ/ಉಪ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
7. ಮಾನ್ಯ ಕಂದಾಯ ಅಧಿಕಾರಿ(ಮಲ್ಲೇಶ್ವರಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
8. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ವಿದ್ಯುತ್/ತೋಟಗಾರಿಕೆ/ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರ ಅವಗಾಹನೆಗಾಗಿ ಮಂಡಿಸಿದೆ.
9. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ಮತ್ತಿಕೆರೆ) ಉಪ ವಿಭಾಗ ರವರ ಅವಗಾಹನೆಗಾಗಿ ಮಂಡಿಸಿದೆ.
10. ಸಹಾಯಕ ಕಂದಾಯ ಅಧಿಕಾರಿ(ಕಲ್ಯಾಣ–ಪಶ್ಚಿಮ) ರವರ ಅವಗಾಹನೆಗಾಗಿ ಮಂಡಿಸಿದೆ.
11. ಕಛೇರಿ ಕಡತಕ್ಕೆ.

ಪು.ತಿ.ನೋ